ಹೇಳಿದ ಒಂದು ಘಟನೆ, ಪತ್ರಿಕೆಯಲ್ಲಿ ಓದಿದ ಒಂದು ಸುದ್ದಿ ಅಥವಾ ಇನ್ನೊಬ್ಬರು ಬರೆದ ಕಥೆ ನಮಗೆ ಹೊಸ ಕಥೆಗೆ ಪ್ರೇರಣೆಯಾಗಬಹುದು. ಮಾನವೀಯತೆಯ ಸ್ಪರ್ಶವಿರುವ ಯಾವ ವಸ್ತುವಾದರೂ ನನ್ನನ್ನು ಆಕರ್ಷಿಸುತ್ತದೆ. ನನ್ನ ಮಿತ್ರರೊಬ್ಬರು ಹೇಳಿದ ಅಂಧ ಹೆಣ್ಣುಮಗಳೊಬ್ಬಳ ಲೈಂಗಿಕ ಶೋಷಣೆಯ ಎಳೆ 'ಮುನಿತಾಯಿ' ಕಥೆಯಾಗಿ ರೂಪುಗೊಂಡಿತು. ಅಪಘಾತದಲ್ಲಿ ಅರೆಜೀವವಾಗಿ ರಸ್ತೆಯಲ್ಲಿ ಬಿದ್ದ ಒಬ್ಬ ವ್ಯಕ್ತಿಯ ಬಗೆಗೆ ಸಾರ್ವಜನಿಕರ ಪ್ರತಿಕ್ರಿಯೆ 'ಕಳೇಬರ' ಕಥೆಯಾಯಿತು. ಲಾಟೂರಿನಲ್ಲಿ ಭೂಕಂಪವಾದಾಗ ಸೆರೆಮನೆಯ ಗೋಡೆ ಕುಸಿದು ಮರಣದಂಡನೆಗೆ ಗುರಿಯಾಗಿದ್ದ ಕೈದಿಗಳು ತಪ್ಪಿಸಿಕೊಂಡು ಓಡಿಹೋದ ಸುದ್ದಿಯನ್ನು ಓದಿದಾಗ 'ಕುಣಿಕೆ' ಕಥೆ ಸ್ಫುರಿಸಿತು; ಮನುಷ್ಯರು ಕೊಟ್ಟ ತೀರ್ಪಿಗಿಂತ ದೇವರು ಕೊಟ್ಟ ತೀರ್ಪು ಮಹತ್ವದ್ದೆನ್ನಿಸಿತು. ರಾತ್ರಿಹೊತ್ತು ದಾರಿಯಲ್ಲಿ ತಡವರಿಸುತ್ತಾ ಹೋಗುತ್ತಿದ್ದ ಅಂಧನಿಗೆ ಮಾರ್ಗದರ್ಶನ ಮಾಡಲು ಹೋದ ಒಬ್ಬ ವ್ಯಕ್ತಿಗೆ, ಇದ್ದಕ್ಕಿದ್ದಂತೆಯೇ ಕರೆಂಟ್ ಹೋಗಿ ಕಗ್ಗತ್ತಲು ಕವಿದಾಗ ಆ ಅಂಧನೇ ಮಾರ್ಗದರ್ಶಕನಾಗುತ್ತಾನೆ– 'ನಡುದಾರಿಯಲ್ಲೊಬ್ಬ ಷೆರ್ಲಾಕ್‌ಹೋಮ್ಸ್' ಕಥೆಯಲ್ಲಿ. ಬೆಂಗಳೂರಿನ 'ಪಲ್ಲವಿ' ಚಿತ್ರಮಂದಿರವನ್ನು ಕಟ್ಟುವಾಗ ಸುತ್ತುಮುತ್ತಿನ ಕೊಂಪೆಯನ್ನು ಒಕ್ಕಲೆಬ್ಬಿಸಿದ್ದನ್ನು ನೋಡಿ 'ಕೊಂಪೆಯಲ್ಲಿ ಕಟ್ಟುತ್ತಿರುವ ಬಂಗಲೆ' ಬರೆದೆ. ಹಾಗೆಯೇ 'ಬಡತನಕೆ ಉಂಬುವ ಚಿಂತೆ' ಸ್ಲಮ್‌ಗೆ ಬೆಂಕಿಹಚ್ಚುವ ಕಥೆ. 'ಮರದ ಕೆಳಗೆ ಮಾನವರು' ಅಲೆಮಾರಿಗಳ ಜೀವನವನ್ನು ಕಂಡಾಗ ಬರೆದದ್ದು. ಹರಿಜನ ವಿದ್ಯಾರ್ಥಿಗಳಿಗೆ ಶಾಲಾ ಉಪಾಧ್ಯಾಯರೊಬ್ಬರು ಕ್ಷೌರ ಮಾಡಿದ ಸುದ್ದಿ ಓದಿ 'ಚೇಳೂರು ಚೌಕದ ಮೇಷ್ಟ್ರು' ಕಥೆ ಬರೆದೆ. ರಂಗನತಿಟ್ಟುವಿನಲ್ಲಿ ಮೊಸಳೆಯು ತೆಪ್ಪಕ್ಕೆ ಆಕ್ರಮಣ ಮಾಡಿದ ಸುದ್ದಿಯನ್ನು ಒಬ್ಬರು ಹೇಳಿದಾಗ 'ನಡು ನೀರಿನಲ್ಲಿ' ಎಂಬ ಕಥೆಯನ್ನು ಬರೆದೆ. ಕೃಷ್ಣಮೂರ್ತಿ ಹನೂರು ಅವರ 'ಕೇರಿಗೆ ಬಂದ ಹೋರಿ' ಕಥೆಯನ್ನು ಓದಿದ ಹಿನ್ನೆಲೆಯಲ್ಲಿ ಅದೇ ವಸ್ತುವಿನ ಇನ್ನೊಂದು ಸಾಧ್ಯತೆ 'ಅಗ್ನಿಪ್ರವೇಶ'ದಲ್ಲಿ ಮೂಡಿಬಂತು. ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ ಗಾಂಧಿಯಂತೆ ವೇಷಧರಿಸಿದ ವ್ಯಕ್ತಿಯನ್ನು ನೋಡಿದಾಗ 'ಗಾಂಧಿ ವೇಷಧಾರಿಯ ಕಥೆ' ರೂಪುಗೊಂಡಿತು. ಕೆಲವು ಸಲ ವಸ್ತುವನ್ನು ತಿರುವು ಮುರುವು ಮಾಡುವುದರಿಂದ ಅನೇಕ ಕಥೆಗಳು ಹುಟ್ಟಿಕೊಂಡಿವೆ. 'ಅನಾವರಣ' ಕಥೆಯಲ್ಲಿ ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಲು ಹೋದವನು ತಾನೇ ಅವನಿಗೆ ವೈದ್ಯಕೀಯ ಚಿಕಿತ್ಸೆ ನೀಡಿ ಆ ವ್ಯಕ್ತಿಯ ಪ್ರಾಣ ಉಳಿಸುತ್ತಾನೆ. 'ಹಬ್ಬಿದಾ ಮಲೆ ಮಧ್ಯದೊಳಗೆ' ಕಥೆಯಲ್ಲಿ ಆಳನ್ನು ಕೊಲೆ ಮಾಡಲು ಹೋಗಿ ಆಯ ತಪ್ಪಿ ಉಸುಬಿನಲ್ಲಿ ಬೀಳುವ ಒಡೆಯನನ್ನು ಆಳೇ ರಕ್ಷಿಸಿ ಜೀವ ಉಳಿಸುತ್ತಾನೆ. 'ಅದ್ವಿತೀಯ' ಕಥೆಯಲ್ಲಿ ಒಂದೇ ಹೆಸರಿನ ಇಬ್ಬರು ನಟರ ನಡುವಣ ಸಂಘರ್ಷದಿಂದ ಒಂದನೆಯ ನಟ ಎರಡನೆಯ ನಟನನ್ನು ಕೊಲ್ಲಲು ಸುಪಾರಿ ನೀಡುತ್ತಾನೆ. ಆದರೆ ಕೊಲೆಗಡುಕರು ತಪ್ಪಾಗಿ ತಿಳಿದು ಒಂದನೆಯ ನಟನನ್ನೇ ಕೊಲ್ಲುತ್ತಾರೆ. 'ಕತ್ತಲ ಗರ್ಭ'ದಲ್ಲೂ ಇಂತಹ ಪ್ರಸಂಗವಿದೆ. 'ಒಂದೇ ಸೂರಿನ ಕೆಳಗೆ' ಕಿರು ಕಾದಂಬರಿಯಲ್ಲಿ ತಂದೆತಾಯಿಯಿಲ್ಲದ ವ್ಯಕ್ತಿಯೊಬ್ಬ ವೃದ್ಧಾಶ್ರಮಕ್ಕೆ ಹೋಗಿ ತಂದೆತಾಯಿಯರನ್ನು ದತ್ತು ತೆಗೆದುಕೊಳ್ಳುತ್ತಾನೆ. ಹೀಗೆ ವಸ್ತುವನ್ನು ಬೇರೆ ಬೇರೆ ದಿಕ್ಕುಗಳಿಂದ ನೋಡುವಾಗ ಹೊಸ ಹೊಳಪೊಂದು ಪ್ರಾಪ್ತವಾಗುತ್ತದೆ. ವಸ್ತುವಿಗೆ ಅನುಗುಣವಾಗಿ ತಂತ್ರವು ಸಹಜವಾಗಿಯೇ ಬರುತ್ತದೆ. 'ಪೂರ್ಣ ವಿರಾಮ'ದಲ್ಲಿ ಪಾತ್ರಗಳೇ ಕಥೆ ಹೇಳುತ್ತವೆ. 'ಚಿಟ್ಟೆ ಮನುಷ್ಯ', 'ಗವಿ', 'ಓಣಿ', 'ಸಸಾರ', 'ನರವಾಹನ' ಕಥೆಗಳಲ್ಲಿ ಫ್ಯಾಂಟಸಿಯನ್ನು ಬಳಸಿದ್ದೇನೆ. 'ಸಾಗರದಂಥ